Ref.No. 49/2023

WW-1,

ದಿನಾಂಕಃ 02-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದ

ನಾನು ಮೈಸೂರು ವರ್ಕರ್ಸ್ ಜನರಲ್ ಯೂನಿಯನ್ ರಲ್ಲಿ 2020 ರಿಂದ ಪ್ರಧಾನ ಕಾರ್ಯದರ್ಶಿ ಯಾಗಿರುತ್ತೇನೆ. 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಯಾವಾಗ ಯೂನಿಯನ್ ನ್ನು ಸ್ಥಾಪಿಸಲಾಯಿತು ಎಂದು ನಿಖರವಾದ ದಿನಾಂಕ ಹೇಳಲು ನನಗೆ ಈಗೆ ನೆನಪಿಲ್ಲ. ಸಿ ಟಿ ಸಿಲ್ಕ್ ಕಂಪನಿ ಎಂಪ್ಲಾಯಿಸ್ ಯೂನಿಯನ್ ಎಂದು ಪ್ರತ್ಯೇಕ ಯೂನಿಯನ್ ಇರುವುದಿಲ್ಲ ಎಂದರೆ ಘಟಕ ಇರುತ್ತದೆ. ಸದರಿ ಘಟಕವನ್ನು ಪ್ರತ್ಯೇಕವಾಗಿ ರಿಜಿಸ್ಟರ್ ಮಾಡಲಾಗಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ . ಪ್ರತ್ಯೇಕವಾಗಿ ರಿಜಿಸ್ಟರ್ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದದು ಬೈ ಲಾ ನಲ್ಲಿ ಇರುತ್ತದೆ ಸದರಿ ಬೈಲಾ ವನ್ನು ನಾನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ ಮುಂದಿನ ದಿನಾಂಕದಂದು ಹಾಜರು ಪಡಿಸುತ್ತೇನೆ. ಟ್ರೇಡ್ ಯೂನಿಯನ್ ಆಕ್ಟ್ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ಆಕ್ಟ್ ನಲ್ಲಿ ಘಟಕಗಳನ್ನು ರಿಜಿಸ್ಟರ್ ಮಾಡುವುದರ ಬಗ್ಗೆ ಕಾನೂನು ಇರುತ್ತದೆ. ಈ ಪ್ರಕರಣದ ವಿವಾದವನ್ನು ಘಟಕವು ಎತ್ತಿರುವುದಿಲ್ಲ ಎಂದರೆ ಸರಿ . ನಾನು ಹೇಳಿದಂತಹ ಘಟಕವು ಅಸ್ತಿತ್ವದಲ್ಲಿ ಇರದ ಕಾರಣ ಈ ಪ್ರಕರಣದ ವಿವಾದವನ್ನು ಸದರಿ ಘಟಕದ ಮೂಲಕ ಎತ್ತಿರುವುದಿಲ್ಲ ಎಂದರೆ ಸರಿಯಲ್ಲ . ಮೈಸೂರು ವರ್ಕರ್ಸ್ ಜನರಲ್ ಯೂನಿಯನ್ ನಲ್ಲಿ ಬೇರೆ ಸಂಸ್ಥೆಗಳ ಕೆಲಸಗಾರರು ಸದಸ್ಯರಾಗಿರುತ್ತಾರೆ ಎಂದರೆ ಸರಿ . ಸದರಿ ಸಂಸ್ಥೆಗಳು ಗಾರ್ಮೆಂಟ್ಸ್ , ಹೋಟೆಲ್ಸ್ , ಎಂಜಿನಿಯರಿಂಗ್ ಇಂಡಸ್ಟ್ರಿ, ಟೆಕ್ಸ್ ಟೈಲ್ಸ್ ಇಂಡಸ್ಟ್ರಿಗಳಾಗಿರುತ್ತವೆ ಎಂದರೆ ಸರಿ . ಪ್ರತಿಯೊಂದು ಸಂಸ್ಥೆ ಗೂ ಕರ್ನಾಟಕ ಸರ್ಕಾರವು ಕನಿಷ್ಟ ವೇತನ ಕಾಯಿದೆ ಅಡಿಯಲ್ಲಿ ಕನಿಷ್ಟ ವೇತನವನ್ನು ನಿಗದಿಪಡಿಸುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆ ಯು ಚಾಮುಂಡಿ ಸಿಲ್್ಕ ಸಂಸ್ಥೆ ಯ ಅಂಗಸಂಸ್ಥೆಗಿರುತ್ತದೆ ಎಂದರೆ ಸರಿ . ಚಾಮುಂಡಿ ಸಿಲ್್ಕ ರವರು 1940 ರಲ್ಲಿ ಸಂಸ್ಥೆಯನ್ನು ಪ್ರಾರಂಬಿಸಿರುತ್ತಾರೆ ಎಂದರೆ ಸರಿ . ಚಾಮುಂಡಿ ಸಿಲ್್ಕ ರವರು2 ನೇ ಪಾರ್ಟಿ ಸಂಸ್ಥೆ ಯನ್ನು ಹೆಣ್ಣು ಮಕ್ಕಳಿಗಾಗಿ ಪ್ರಾರಂಭಿಸಲಾಯಿತು ಎಂದರೆ ಸರಿ . ಚಾಮುಂಡಿ ಸಿಲ್್ಕ ನಲ್ಲಿ ಟ್ರೇಡ್ ಯೂನಿಯನ್ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಟ್ರೇಡ್ ಯೂನಿಯನ್ ಚಾಮುಂಡಿ ಸಿಲ್ ್ಕ ಆಡಳಿತ ವರ್ಗದವರೊಂದಿಗೆ 3 ವರ್ಷಕ್ಕೊಮ್ಮೆ ಸೆಟ್ಲಮೆಂಟ್ ಮಾಡಿಕೊಂಡು ತಮ್ಮ ಸಂಬಳವನ್ನು ಜಾಸ್ತಿ ಮಾಡಿಕೊಳ್ಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . 2 ನೇ ಪಾರ್ಟಿ ಸಂಸ್ಥೆ ಯನ್ನು ಬಾಡಿಗೆ ಜಾಗದಲ್ಲಿ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ . ಸದರಿ ಸಂಸ್ಥೆಯಲ್ಲಿ ಪ್ರಾರಂಬದಲ್ಲಿ 30-40 ಜನ ಕೆಲಸಗಾರರಿದ್ದು ನಂತರ ಚೆನ್ನಾಗಿ ನಡೆಯದೆ ಇದ್ದ ಕಾರಣ ಕೇವಲ 13 ಜನ ಕೆಲಸಗಾರರು ಉಳಿದು ಕೊಂಡಿದ್ದರು ಎಂದರೆ ಸರಿಯಲ್ಲ.

2 ನೇ ಪಾರ್ಟಿ ಸಂಸ್ಥೆ ಯು ಈಗ ಮುಚ್ಚಲಾಗಿರುತ್ತದೆ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆ ಯ ಕೆಲಸಗಾರರು ನಮ್ಮ ಯೂನಿಯನ್ ನ್ನು ಯಾವಾಗ ಸೇರಿಕೊಂಡಿರುತ್ತಾರೆ ಎಂದು ತೋರಿಸಲು ದಾಖಲಾತಿಗಳನ್ನು ಈ ನ್ಯಾಯಾಧೀಕರಣದ ಮುಂದೆ ಸಲ್ಲಿಸಲು ನನಗೆ ತೊಂದರೆ ಇರುವುದಿಲ್ಲ. 2 ನೇ ಪಾರ್ಟಿ ಯೂನಿಯನ್ ನ ಕೆಲಸಗಾರರು ನಮ್ಮ ಸಂಘವನ್ನು ಸೇರುವ ಮೊದಲು ಅಲ್ಲಿ ಬೇರೆ ಯಾವುದೇ ಸಂಘ ಇರಲಿಲ್ಲ ಎಂದರೆ ಸರಿ . ಕೆಲಸಗಾರರರು ನಮ್ಮ ಯೂನಿಯನ್ ಸೇರಿಕೊಳ್ಳುವ ಮೊದಲು ಅವರ ಮತ್ತು ಆಡಳಿತ ವರ್ಗ ದವರ ಸಂಬಂಧ ಚೆನ್ನಾಗಿತ್ತು ಎಂದರೆ ಸರಿಯಲ್ಲ. ನಾನು ಎಂದೂ ಕೂಡ 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಕೆಲಸ ಮಾಡಿಲ್ಲ. ನಾನು ಬಿ ಇ ಎಂ ಎಲ್ ಪಬ್ಲಿಕ್ ಸೆಕ್ಟರ್ ನಲ್ಲಿ ಕೆಲಸ ಮಾಡಿದ ಅನುಭವ ಮಾತ್ರ ಇರುತ್ತದೆ ಎಂದರೆ ಅದು ಮತ್ತು ಬರುಕಾ ಅಲುಮಿನಿಯಂ ಖಾಸಗಿ ಸಂಸ್ಥೆ ಯಲ್ಲಿ ಕೆಲಸ ಮಾಡಿದ ಅನುಭವ ಇರುತ್ತದೆ. 1 ನೇ ಪಾರ್ಟಿ ಯೂನಿಯನ್ ಎ ಐ ಟಿ ಯು ಸಿ ಗೆ ಅಫಿಲೇಟ್ ಆಗಿರುತ್ತದೆ ಎಂದರೆ ಸರಿ . ಅದೇ ರೀತಿ ಸಿ ಐ ಟಿ ಯು ಸಿ ಮತ್ತು ಇತರ ಸಂಘಗಳು ಅಸ್ತಿತ್ವದಲ್ಲಿ ಇವೆ ಎಂದರೆ ಸರಿ . ನಮ್ಮ ಸಂಸ್ಥೆಯಲ್ಲಿ ಎಷ್ಟು ಸದಸ್ಯರಿರುತ್ತಾರೆ , ಅದರ ಮೇಲೆ ಬಾರ್ಗೇನಿಂಗ್ ಪವರ್ ಅವಲಂಬಿಸುತ್ತದೆ ಎಂದರೆ ಸರಿ . ಆದುದರಿಂದ 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಕೇವಲ 13 ಜನ ಕೆಲಸಗಾರರು ಇದ್ದರೂ ಕೂಡ ಅವರಿಗೆ ಆಮಿಷ ಒಡ್ಡಿ ಅವರನ್ನು ನಮ್ಮ ಸಂಘಕ್ಕೆ ಸೇರಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ .

ನನಗೆ ಸಿಲ್ಕ್ ಸಂಸ್ಥೆ ಗಳಲ್ಲಿ ಕೆಲಸ ಮಾಡಡಿದ ಅನುಭವ ಇರುವುದಿಲ್ಲ ಆದರೆ ಟ್ರೇಡ್ ಯೂನಿಯನ್ ನಡೆಸಿದ ಅನುಭವ ಇರುತ್ತದೆ. 2 ನೇ ಪಾರ್ಟಿ ಸಂಸ್ಥೆ ಯ ಸುತ್ತಮುತ್ತ ಬೇರೆ ಯಾವುದೇ ಸಿಲ್್ಕ ಸಂಸ್ಥೆ ಗಳು ಇರುವುದಿಲ್ಲ. ನಾವು charter of demands ನಲ್ಲಿ ಕೇಳಿದಂತಹ ಬೇಡಿಕೆಗಳನ್ನು ಬೆಲೆ ಏರಿಕೆ ಮತ್ತು ಜೀವನ ಮಟ್ಟ ಸುಧಾರಣೆಯ ಆಧಾರದ ಮೇಲೆ ಕೇಳಿರುತ್ತೇವೆ. ಸರ್ಕಾರವು ಕನಿಷ್ಟ ವೇತನ ಕಾಯಿದೆ ಅಡಿಯಲ್ಲಿ ವಿಡಿಎ ಯನ್ನು ಪ್ರತಿ ವರ್ಷ ಹೆಚ್ಚಿಸುತ್ತಾರೆ ಎಂದರೆ ಸರಿ . Consumer price index ನ್ನು ಲೆಕ್ಕಕ್ಕೆ ತೆಗೆದುಕೊಂಡು ವಿಡಿಎ ನ್ನು ಹೆಚ್ಚಿಸಲಾಗುತ್ತದೆ ಎಂದರೆ ಸರಿ . ನಾನು ಎಂದೂ ಕೂಡ 2 ನೇ ಪಾರ್ಟಿ ಸಂಸ್ಥೆ ಯ profit and loss and balance sheet ನ್ನು ನೋಡಿರುವುದಿಲ್ಲ.

ನಮ್ಮ ಬೇಡಿಕೆಯನ್ನು ಪರಿಗಣಿಸಿ ಅದನ್ನು ಒಪ್ಪಿಕೊಂಡಲಿ ಸಂಸ್ಥೆ ಯನ್ನು ನಡೆಸಲು ಸಾಧ್ಯವಿಲ್ಲ ಎಂದು ತಿಳಿದು 2 ನೇ ಪಾರ್ಟಿಯವರು ಸಂಸ್ಥೆಯನ್ನು ಮುಚ್ಚಿರುತ್ತಾರೆ ಎಂದರೆ ಸರಿಯಲ್ಲ . ಸಂಸ್ಥೆಯನ್ನು ಮುಚ್ಚಿ ಬಾಡಿಗೆ ಜಾಗವನ್ನು ಮಾಲೀಕರಿಗೆ ಹಿಂದಿರುಸುವ ಕಾಲಕ್ಕೆ ನಾವು ನ್ಯಾಯಾಲಯ ಕ್ಕೆ ಹೋಗಿ ಮೆಷಿನರಿಯನ್ನು ಶಿಪ್ಟ್ ಮಾಬಾರದೆಂದದು ಆದೇಶವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿ . ಈಗಲೂ ಕೂಡ 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಉತ್ಪಾದನೆ ನಡೆಯುತ್ತಿಲ್ಲ ಎಂದರೆ ಸರಿ . 2 ನೇ ಪಾರ್ಟಿ ಸಂಸ್ಥೆ ಯು ಈಗಲೂ ಕೂಡ ಜಾಗಕ್ಕೆ ಬಾಡಿಗೆಯನ್ನು ನೀಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ .

ಸಂಸ್ಥೆಯನ್ನು ಮುಚ್ಚುವ ಕಾಲಕ್ಕೆ retrenchment compensation ನ್ನು ನೀಡಿರುತ್ತಾರೆ ಎಂದರೆ ಸರಿ . ಸಾಕ್ಷಿದಾರರು ಮುಂದುವರೆದು ಅದು ಕಾನ ೂನು ಬದ್ಧವಾಗಿರುವುದಿಲ್ಲ ಎಂದು ನುಡಿಯುತ್ತಾರೆ . ನನ್ನ ಅಭಿಪ್ರಾಯದ ಪ್ರಕಾರ ಅದು ಕಾನೂನು ಬದ್ಧವಾಗಿರುವುದಿಲ್ಲ ಎಂದು ಹೇಳುತ್ತಿದ್ದೇನೆ. ಆಡಳಿತ ವರ್ಗದವರು ಕಾನೂನುಬದ್ಧವಾಗಿ ಪರಿಹಾರವನ್ನು ನೀಡಿದ್ದರೂ ಸಹ ಸಂಸ್ಥೆಯ ಮೇಲೆ ಒತ್ತಡವನ್ನು ಹೇರುವ ಕಾರಣ ವಿವಿದ. ಪ್ರಕರಣ ಗಳನ್ನು ಅವರ ವಿರುದ್ಧ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನನಗೆ ಯಾರು authorization ನ್ನು ನೀಡಿರುವುದಿಲ್ಲ. ನೀವು ಸ್ವ ಇಚ್ಚೆಯಿಂದ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಕಾರ್ಮಿಕರ ಇಚ್ಚೆಯ ಮೇರೆಗೆ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ . ಕಾರ್ಮಿಕ ರು ನನಗೆ authorization ಕೊಟ್ಟಿರುವುದಿಲ್ಲ ನಾವೇ ಕಾರ್ಮಿಕ ರಿಗೆ ಆಮಿಷಗಳನ್ನು ಒಡ್ಡಿ ಗಲಾಟೆ ಮಾಡಿಸಿದ್ದರಿಂದ ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಆಡಳಿತ ವರ್ಗದವರು ನೀಡಿದ ಪರಿಹಾರವು ಕಾನೂನುಬದ್ಧವಾಗಿದ್ದರಿಂದ ಈ ಪ್ರಕರಣದಲ್ಲಿ ಕೇಳಿದಂತಹ ಬೇಡಿಕೆಗಳನ್ನು ಆಡಳಿತ ವರ್ಗ ದವರು ಈಡೇರಿಸಲು ಭಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ . 2 ನೇ ಪಾರ್ಟಿ ಸಂಸ್ಥೆ ಯು ಒಂದು ವರ್ಷದಿಂದ ಮುಚ್ಚಿದ್ದು ಅದರ ಹಣಕಾಸಿನ ಪರಿಸ್ತಿತಿ ಚೆನ್ನಾಗಿರುವುದಿಲ್ಲ ಆದುದರಿಂದ ಅದು ನಾವು ಕೇಳಿದಂತಹ ಬೇಡಿಕೆಗಳನ್ನು ಈಡೇರಿಸಲು ಭಾಧ್ಯಸ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.